೫) ದಿನಾಂಕ 5.8.96ರಂದು ಮಂಡ್ಯ ಜಿಲ್ಲೆ ಮಳವಳ್ಳಿಯಲ್ಲಿ ಆಗಿರುವ ಲಾಕಪ್ ಡೆತ್

+ಶ್ರೀ ಸಿ.ಹೆಚ್. ವಿಜಯಶಂಕರ್ (ಹುಣಸೂರು) : ಮಾನ್ಯ ಅಧ್ಯಕ್ಷರೆ, ದಿನಾಂಕ 5.8.96ರಂದು ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಲಾಕಪ್ ಡೆತ್ ಏನಾಯಿತು ಆ ಸಾವಿನ ಬಗ್ಗೆ ನಾನು ಈ ಸದನದಲ್ಲಿ ಪ್ರಸ್ತಾಪವನ್ನು ಮಾಡುತ್ತಿದ್ದೇನೆ. ದಿನಾಂಕ 5.8.96ರಂದು ನಮ್ಮ ಮೈಸೂರು ಜಿಲ್ಲೆಯ ಕೊಳ್ಳೇಗಾಲ ಗ್ರಾಮದ ಗೋವಿಂದರಾಜು ಎನ್ನುವಂತಹ ವ್ಯಕ್ತಿ ಮಳವಳ್ಳಿಯ ನಾಗರಾಜು ಎಂಬ ಚಿನ್ನಬೆಳ್ಳಿ ಆಭರಣಗಳ ಅಂಗಡಿಯನ್ನಿಟ್ಟುಕೊಂಡಿರುವ ವ್ಯಕ್ತಿಯ ಅಂಗಡಿಯಲ್ಲಿ ಕೂಲಿಕಾರನಾಗಿ ಕೆಲಸವನ್ನು ಮಾಡಿಕೊಂಡಿದ್ದ. ನಾಗರಾಜು ಎಂಬ ಅಂಗಡಿಯ ಮಾಲೀಕ ಕೆಲವೊಂದು ಕಳ್ಳಪದಾರ್ಥಗಳನ್ನು ತೆಗೆದುಕೊಂಡಿದ್ದಾರೆಂದು ಹೇಳಿ ಗುಮಾನಿಯ ಮೇಲೆ ಪೋಲೀಸರು ತನಿಖೆಗೆ ಬಂದಂತಹ ಸಮಯದಲ್ಲಿ ಅಂಗಡಿಯ ಮಾಲೀಕ ಅಂಗಡಿಯಲ್ಲಿರಲಿಲ್ಲ. ಆ ಸಮಯದಲ್ಲಿ ವಿಚಾರಣೆಗೋಸ್ಕರ ಅಂಗಡಿಯಲ್ಲಿ ಕೆಲಸಕ್ಕೆ ಇದ್ದಂತಹ ಗೋವಿಂದರಾಜು ಎಂಬ ವ್ಯಕ್ತಿಯನ್ನು ಪೋಲೀಸರು ಜೀಪಿನಲ್ಲಿ ಕರೆದುಕೊಂಡು ಹೋಗುತ್ತಾರೆ. ಕೆಲವು ಸಮಯದ ನಂತರ ಆತನನ್ನು ಆಟೋರಿಕ್ಷಾದಲ್ಲಿ ಕರೆದುಕೊಂಡು ಬಂದು ವಾಪಸು ಬಿಡುತ್ತಾರೆ. ಕರೆದುಕೊಂಡು ಹೋಗುವಂತಹ ಸಮಯದಲ್ಲಿ ಜೀವಂತನಾಗಿದ್ದಂತಹ 28 ವರ್ಷದ ವಿಶ್ವಕರ್ಮ ಜನಾಂಗದ ಯುವಕ, ವಾಪಸು ಕರೆದುಕೊಂಡು ಬಂದು ಆಟೋದಲ್ಲಿ ಇಳಿಸಿದಂತಹ ಸಮಯದಲ್ಲಿ ಸಾವಿಗೀಡಾಗಿರುತ್ತಾನೆ. ಈ ಸಮಾಚಾರ ವಿಶ್ವಕರ್ಮ ಜನಾಂಗಕ್ಕೆ ಗೊತ್ತಾಗಿ ಪ್ರತಿಭಟನೆಗೆ ತೊಡಗಿದ ಸಮಯದಲ್ಲಿ ಅವರ ಪ್ರತಿಭಟನೆಗೆ ಬೆದರಿದಂತಹ ಅಧಿಕಾರಿಗಳು ಅವನು ಭಯದಿಂದ ಸಯನೈಡ್ ತಿಂದು ಸಾವನ್ನು ಅಪ್ಪಿದ್ದಾನೆಂದು ಪೋಲೀಸ್ ಅಧಿಕಾರಿಗಳಿಗೆ ಹೇಳಿಕೆಯನ್ನು ಕೊಡುತ್ತಾರೆ.

ನಂತರ ಪ್ರತಿಭಟನೆ ತುಂಬಾ ಜೋರಾಗಿ ಆದಂತಹ ಸಮಯದಲ್ಲಿ ತಹಶೀಲ್ದಾರ್ ನೇತೃತ್ವದಲ್ಲಿ ಶವ ಪರೀಕ್ಷೆಯನ್ನು ಮಾಡುವಂತಹ ಪಂಚನಾಮೆಯನ್ನು ಮಾಡುವಂತಹ ಕೆಲಸ ನಡೆಯುತ್ತದೆ. ಆ ಸಮಯದಲ್ಲಿ ಅಲ್ಲಿನ ಸ್ಥಳೀಯ ವೈದ್ಯಾಧಿಕಾರಿಗಳು ಅವನು ಭಯದಿಂದ ಹೃದಯಘಾತದಿಂದ ಸತ್ತಿದ್ದಾನೆಂದು ಘೋಷಣೆ ಮಾಡುತ್ತಾರೆ. ಈ ರೀತಿ ದ್ವಂದ್ವ ಹೇಳಿಕೆಯನ್ನು ನೀಡುವಂತಹ ಕೆಲಸ ಅಲ್ಲಿ ನಡೆಯುತ್ತದೆ. ಈ ಸಮಯದಲ್ಲಿ ನಾನು ಸರ್ಕಾರರಕ್ಕೆ ಮಾಡುವಂತಹ ಮನವಿ ಏನೆಂದರೆ, ಈ ವಿಚಾರದಲ್ಲಿ ಒಬ್ಬ ಬಹಳ ಉನ್ನತ ಪೋಲೀಸ್ ಅಧಿಕಾರಿಯಿಂದ ವ್ಯವಸ್ಥಿತವಾದ ತನಿಖೆಯಾಗಬೇಕು. ಈ ಸಾವಿನ ಹಿಂದೆ ಇರುವಂತಹ ವಿಷಯ ಬಹಿರಂಗಗೊಳ್ಳಬೇಕು. ಮತ್ತೆ ಆ 28 ವರ್ಷದ ಯುವಕ ಮೂರು ಜನ ಮಕ್ಕಳನ್ನು ಮತ್ತು ಹೆಂಡತಿಯನ್ನು ಅಗಲಿದ್ದಾರೆ. ಆತನ ಸಂಸಾರಕ್ಕೆ ಬಹಳ ದೊಡ್ಡ ಅನ್ಯಾಯವಾಗಿದೆ. ಈವೊಂದು ವಿಚಾರದಲ್ಲಿ ಸರ್ಕಾರ ಸೂಕ್ತವಾದಂತಹ ಪರಿಹಾರವನ್ನು ಘೋಷಿಸುವಂತಹ ಕೆಲಸವನ್ನು ಮಾಡಬೇಕು. ಈ ವಿಚಾರದಲ್ಲಿ ಸೂಕ್ತವಾದ ತನಿಖೆ ನಡೆಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ತಪ್ಪಿತಸ್ಥರಿಗೆ ತಕ್ಕ ಶಾಸ್ತಿಯನ್ನು ಮಾಡುವಂತಹ ಕೆಲಸವನ್ನು ಮಾಡಬೇಕೆಂದು ನಾನು ಸರ್ಕಾರವನ್ನು ಕೇಳುವುದರ ಜೊತೆಗೆ ಇದರ ಬಗ್ಗೆ ಸ್ಪಷ್ಟಮಾದ ಒಂದು ಹೇಳಿಕೆಯನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸಲಹೆಯನ್ನು ನಾನು ಒಪ್ಪುತ್ತೇನೆ. ಈಗಾಗಲೇ ನಮ್ಮ ಪೋಲೀಸ್ ಇಲಾಖೆಯ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿದ್ದಾರೆ. ಇದರ ಹಿಂದೆ ಅವನನ್ನು ಕೊಲೆ ಮಾಡಿದ್ದಾರೆಂದು ಏನಾದರೂ

ಶಂಕೆ ಇದ್ದರೆ, ಈಗಾಗಲೇ ಅಧಿಕಾರಿಗಳು ಕಾರ್ಯ ಪ್ರವೃತ್ತರಾಗಿದ್ದಾರೆ. ಹಿರಿಯ ಅಧಿಕಾರಿಗಳ ಮುಖಾಂತರ ಈ ಕೆಲಸವನ್ನು ಮಾಡಿಸುತ್ತೇವೆ.

ಶ್ರೀ ಸಿ.ಹೆಚ್. ವಿಜಯಶಂಕರ್ : ನಾನು ಈ ಲಾಕಪ್ಡೆತ್ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಪರಿಹಾರ ಕೊಡುವ ಬಗ್ಗೆ ಮಾನ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಲಿಲ್ಲ.

ಅಧ್ಯಕ್ಷರು : ಮಾನ್ಯ ವಿಜಯಶಂಕರ್ರವರೆ, ನೀವು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಹೋಮ್ ಮಿನಿಸ್ಟರ್ ಇಲ್ಲಿ ಇಲ್ಲ. ಅವರು ಕೌನ್ಸಿಲ್ನಲ್ಲಿದ್ದಾರೆ. ಕಾನೂನು ಮಂತ್ರಿಗಳು ಸರ್ಕಾರದ ಪರವಾಗಿ ಹೇಳಿದ್ದಾರೆ. ಅವರು ಗಮನಹರಿಸುತ್ತಾರೆ.

ಈ) ಕುಂದಾಪುರ ಕ್ಷೇತ್ರದ ಅಲಬಾಡಿ ಗ್ರಾಮದಲ್ಲಿರತಕ್ಕ 3 ಜನ ಯುವಕರ ಮೇಲೆ ಅರಣ್ಯ ಇಲಾಖೆಯರಿಂದ ಹಲ್ಲೆ

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೆ, ನಾನು ಈ ವಿಚಾರವನ್ನು ಗಮನ ಸೆಳೆಯುವ ಸೂಚನೆಯ ಮುಖಾಂತರ ಕೊಟ್ಟಿದ್ದೆ, ತಾವು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ. ಇದು ಅರಣ್ಯ ಇಲಾಖೆಗೆ ಸಂಬಂಧಪಟ್ಟ ವಿಷಯವಾಗಿದೆ. ದಿನಾಂಕ 25.6.96ರ ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಕುಂದಾಪುರ ಕ್ಷೇತ್ರದ ಅಲಬಾಡಿ ಗ್ರಾಮದಲ್ಲಿರತಕ್ಕ ನೂರಾರಿ ಕ್ಯಾಸ್ಯು ಇಂಡಸ್ಟ್ರಿ ಹತ್ತಿರ ಕಾರಿನಲ್ಲಿ ಬಂದಂತಹ ಇಸ್ತಾಕ್ ಹಮೀರ್ ಮತ್ತು ಷಫೀಕ್ ಎನ್ನತಕ್ಕ ಮೂರು ಜನ ಯುವಕರ ಮೇಲೆ ಅರಣ್ಯ ಇಲಾಖೆಯ ಫಾರೆಸ್ಟರ್, ಗಾರ್ಡ್, ವಾಚ್ಮನ್ ಮತ್ತಿತರರು ರಘುರಾಮ ಎನ್ನತಕ್ಕವರು ಹಲ್ಲೆ ಮಾಡುತ್ತಾರೆ. ಅವರು ಹೀರೊಹೊಂಡ ಮತ್ತು ಬಜಾಜ್ ಬೈಕ್ನಲ್ಲಿ ಬಂದು ಇವರನ್ನು ಪರಿಸರದಲ್ಲಿ ತಡೆದು ಬಡಿಯುತ್ತಾರೆ. ಹೊಡೆದು ಅವರನ್ನು ಹತ್ತಿರವಿರತಕ್ಕ ಫಾರೆಸ್ಟ್ ಕ್ವಾಟ್ರಸ್ಸಿಗೆ ಕರೆದುಕೊಂಡು ಹೋಗುತ್ತಾರೆ. ಆ ಕ್ವಾರ್ಟರ್ಸ್ನಲ್ಲಿ ಅವರಿಂದ ಬೇಕಾದಷ್ಟು ಪತ್ರಗಳಿಗೆ ಸಹಿ ಹಾಕಿಸಿಕೊಂಡು ಅವರ ಹತ್ತಿರ ಇರತಕ್ಕ ಹಣವನ್ನು ಕಸಿದುಕೊಂಡು ಅವರನ್ನು ಬಿಡುತ್ತಾರೆ. ಆ ಶಫೀಕ್ ಎನ್ನತಕ್ಕವರು ಪುತ್ತೂರಿಗೆ ಹೋಗಿ ಅನಂತರ ಆಸ್ಪತ್ರೆಗೆ ಸೇರುತ್ತಾರೆ. ಅವರ ಮೇಲೆ ಮರಣಾಂತಿಕ ಹಲ್ಲೆಯಾಗಿರುವುದರಿಂದ 27ನೇ ತಾರೀಖು ಎಸ್ಸಿಎಫ್ ಹಾಸ್ಪೆಟಲ್, ಮಂಗಳೂರಿಗೆ ಬಂದು ದಾಖಲಾಗುತ್ತಾರೆ. ಇಲ್ಲಿರತಕ್ಕದ್ದು ಅರಣ್ಯ ಇಲಾಖೆಯವರ ವಾದ ಏನೆಂದರೆ, ಅವರು ಕಳ್ಳಸಾಗಾಣಿಕೆದಾರರು, ಅಲೂಮತ್ತಿಯನ್ನು ತೆಗೆದುಕೊಂಡು ಹೋಗಲಿಕ್ಕೆ ಬಂದಿದ್ದರು. ಆದ್ದರಿಂದ ಅವರನ್ನು ಅಟ್ಯಾಕ್ ಮಾಡಿದ್ದೇವೆ ಎನ್ನತಕ್ಕ ಒಂದು ವಾದ ಅವರದು. ಇಲ್ಲಿರತಕ್ಕ ಪ್ರಶ್ನೆ ಎಂದು. ಅರಣ್ಯ ಇಲಾಖೆಯವರು ಅಮಾಯಕರ ಮೇಲೆ ಹಲ್ಲೆ ಮಾಡಿದಂತಹ ಸಂದರ್ಭದಲ್ಲಿ ಸಾರ್ವಜನಿಕರ ಎದುರಿನಲ್ಲಿ ಹೊಡೆದಿದ್ದಾರೆ, ಸಾರ್ವಜನಿಕರ ಎದುರು ತಪಾಸಣೆಯನ್ನು ಮಾಡಿದ್ದಾರೆ. ಅವರಿಗೇನು ಅವರ ಕಾರಿನಲ್ಲಿ ಸಿಕ್ಕಿಲ್ಲ. ಒಂದು ವೇಳೆ ಅವರು ಕಳ್ಳ ಸಾಗಾಣಿಕೆದಾರರೇ ಆಗಿದ್ದರೆ ಅವರ ಕಾರನ್ನು ಏಕೆ ಮುಟ್ಟುಗೋಲು ಹಾಕಲಿಲ್ಲ? ಏಕೆ ಅವರನ್ನು ಬಂಧಿಸಲಿಲ್ಲ ಅಥವಾ ಏಕೆ ಅವರನ್ನು ಪೋಲೀಸ್ರಿಗೆ ಹಸ್ತಾಂತರ ಮಾಡಲಿಲ್ಲ? ಅವರು ಬೇಕಾದ ರೀತಿಯಲ್ಲಿ ಹೊಡೆದು ಇವತ್ತು ಏನೂ ಆಗಿಲ್ಲವೆನ್ನತಕ್ಕ ವಾದವನ್ನು ಮಾಡಿ, 45 ದಿವಸಗಳ ಕಾಲ ಎಸ್ಸಿಎಸ್ ಆಸ್ಪತ್ರೆಯಲ್ಲಿ ಮರಣಾಂತಿಕ ಸ್ಥಿತಿಯಲ್ಲಿದ್ದಾರೆ.

ಯಾರು ಹಲ್ಲೆಗೆ ಒಳಗಾಗಿದ್ದಾರೆ ಅವರಿಗೆ ಅರಣ್ಯ ಇಲಾಖೆಯವರು ಪರಿಹಾರವನ್ನು ಕೊಡಬೇಕು. ಯಾರು ಅಮಾಯಕರ ಮೇಲೆ ಹಲ್ಲೆ ಮಾಡಿದ್ದಾರೆ ಅವರನ್ನು ತಕ್ಷಣ ಅಮಾನತ್ತಿನಲ್ಲಿಡಬೇಕು. ಒಂದು ವೇಳೆ ಅವರು ಕಳ್ಳಸಾಗಾಣಿಕೆದಾರರೇ ಆಗಿದ್ದರೂ ಸಹ ಅವರನ್ನು ಏಕೆ ಬಿಟ್ಟಿದ್ದಾರೆ? ಇವರ ಹಿನ್ನೆಲೆಯೇನು ಎನ್ನತಕ್ಕ ವಿಚಾರವನ್ನು ಪರಿಶೀಲನೆ